ಉಪಾಧ್ಯಕ್ಷರು: ಮಾನ್ಯ ಸುನೀಲ್‌ಕುಮಾರ್‌ರವರೆ, ಈಗ ಚರ್ಚೆ ಬೇಡ.

ಶ್ರೀ ವಿ. ಸುನೀಲ್‌ಕುಮಾರ್: ನಿಮ್ಮ ಸಲಹೆಯನ್ನು ಸಂಬಂಧಪಟ್ಟ ಸಚಿವರಿಗೆ ತಿಳಿಸುತ್ತೇನೆ.

4. ವಿಷಯ: ಬೆಂಗಳೂರು ನಗರದ ಪೊಲೀಸ್ ವಸತಿ ಗೃಹಗಳಿಗೆ ನೀರು ವಿತರಣೆಗೆ ವಿಧಿಸುವ ಶುಲ್ಕದಲ್ಲಿರುವ ತಾರತಮ್ಯದಿಂದ ಉಂಟಾಗಿರುವ ಗೊಂದಲಗಳ ಬಗ್ಗೆ.

****

ಉಪಾಧ್ಯಕ್ಷರು: ಮಾನ್ಯ ಸಿ.ಟಿ.ರವಿಯವರೆ ತಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರ ಬಂದಿಲ್ಲ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹಸಚಿವರಿಗೆ ಗೊತ್ತಿರುವ ವಿಷಯ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಮಾನ್ಯ ಸಿ.ಟಿ.ರವಿಯವರೆ ನನಗೆ ಗೊತ್ತಿರುವ ವಿಷಯವೇ. ಉತ್ತರ ಬಂದಿತ್ತು. ಸರಿಯಾದ ಉತ್ತರ ಇರಲಿಲ್ಲ. ಅದಕ್ಕೋಸ್ಕರ ಸರಿಯಾದ ಉತ್ತರವನ್ನು ನಾಳೆ ಕೊಡುತ್ತೇನೆ.

ಶ್ರೀ ಸಿ.ಟಿ. ರವಿ: ಪರಿಹಾರ ಕೊಟ್ಟುಬಿಡಿ. ನಮಗೆ ಉತ್ತರ ಕೊಡದೇ ಇದ್ದರೂ ಪರವಾಗಿಲ್ಲ. ಒಂದು ಬಾರಿ salary ಯಲ್ಲಿ deduct ಮಾಡಿ ಮತ್ತೆ ಅವರ ಹತ್ತಿರ ದುಡ್ಡು ಕಟ್ಟಿಸಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ರವಿಯವರೆ, ಏನಾಗಿದೆ ಎಂದರೆ, bulk water supply ಆಗುತ್ತಿದೆ. Bulk water supply ಮಾಡುವಾಗ rate ಜಾಸ್ತಿಯಾಗುತ್ತದೆ. Individual supply ಆದರೆ rate ಕಡಿಮೆ ಆಗುತ್ತದೆ. ಇವರು ಏನು ಮಾಡಿದ್ದಾರೆ ಎಂದರೆ ಪ್ರತಿ ತಿಂಗಳು ರೂ. 250/– ಗಳನ್ನು ಸಂಬಳದಿಂದ ಕಟ್ ಮಾಡುತ್ತಿದ್ದರು. ಅದು ಯಾರೋ ಒಬ್ಬರು ತಪ್ಪು ಮಾಡಿ ಸಂಬಳದಿಂದ ಕಟ್ ಮಾಡದೇ ನಿಲ್ಲಿಸಿ 5–6 ತಿಂಗಳು Bangalore Water Supply ನವರಿಗೆ ದುಡ್ಡು ಕೊಡಲಿಲ್ಲ. ಅದಕ್ಕೋಸ್ಕರ ನಾನು ಮೊನ್ನೆ

ಮೀಟಿಂಗ್ ಮಾಡಿ ಅದನ್ನು ಸರಿ ಮಾಡಲು ಹೇಳಿದ್ದೇನೆ. ನನಗೆ ಬಂದ ಉತ್ತರ ಸರಿಯಿರಲಿಲ್ಲ. ನಾಳೆ ಉತ್ತರವನ್ನು ಕೊಡುತ್ತೇನೆ.

ಉಪಾಧ್ಯಕ್ಷರು: ನಾಳೆ ಉತ್ತರವನ್ನು ಕೊಡುತ್ತಾರೆ ಬಿಡಿ. ಡಾ॥ ಕೆ. ಸುಧಾಕರ್‌ರವರು ಹಾಜರಿಲ್ಲ. ಮಾನ್ಯ ಶ್ರೀ ಕೆ.ಗೋಪಾಲ ಪೂಜಾರಿಯವರು ಹಾಜರಿಲ್ಲ. ಶ್ರೀ ಬಿ.ಆರ್.ಪಾಟೀಲ್‌ರವರು ಮಾತನಾಡುವುದು.

5. ವಿಷಯ: ಆಳಂದ ಪಟ್ಟಣದಲ್ಲಿ ರಾಜೀವ್‌ಗಾಂಧಿ ವಸತಿ ಗೃಹ ನಿರ್ಮಾಣ ನಿಗಮದಲ್ಲಿ ಮನೆ ಹಂಚಿಕೆ ಮಾಡಿರುವ ಬಗ್ಗೆ ತನಿಖೆ ನಡೆಸಲು ರಚಿಸಲಾಗಿದ್ದ ತಂಡ ಇದುವರೆಗೂ ವರದಿ ನೀಡದಿರುವ ಬಗ್ಗೆ.

****

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ ಶಾಸಕನಾದ ಮೇಲೆ ಈ ವಿಷಯವನ್ನು ನಾನು ಪದೇ ಪದೇ ಈ ವಿಚಾರ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು: ಗಮನ ಸೆಳೆದು ಬಿಡಿ ಸಾಕು.

ಶ್ರೀ ಬಿ.ಆರ್. ಪಾಟೀಲ್: ಪದೇ ಪದೇ ಇವರು ತಪ್ಪು ಮಾಹಿತಿಯನ್ನು ಕೊಟ್ಟು ಸುಳ್ಳು ಹೇಳಿ ಜಾರಿಕೊಳ್ಳುತ್ತಿದ್ದಾರೆ. ವಸತಿ ಇಲಾಖೆ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಏನು ಮಾಡುತ್ತಾರೆ, 2012 ರಲ್ಲಿ ತರಾತುರಿಯಲ್ಲಿ ಮಾಡಿದರು. ಅದರ ಬಗ್ಗೆ proceedings ಇಲ್ಲ. ಅದು ಕಾನೂನುಬಾಹಿರ ಮಾಡಿ ಕಳುಹಿಸಿದರು. ನಾನು ನಿಗಮಕ್ಕೆ ಹೋಗಿ ಹೇಳಿದ ಮೇಲೆ ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲ ಎಂದು ಹೇಳಿದರು. ಪುನಃ ನಾನು ಬಂದು ಪ್ರಕ್ರಿಯೆ ಶುರು ಮಾಡಿದಾಗ, ಅಲ್ಲಿ ಏನೂ ಇಲ್ಲ. ಇವತ್ತು ಅದು ತಕರಾರು ಆದಮೇಲೆ ಮತ್ತೆ ಇವರು ಹೇಳುತ್ತಾರೆ, ಆಯ್ಕೆಯಾದ ಫಲಾನುಭವಿಗಳ ಪೈಕಿ ಕಛೇರಿಯಲ್ಲಿ ಲಭ್ಯವಿದ್ದ ಫಲಾನುಭವಿಗಳ ಸಂಖ್ಯೆ 434. ಆಯ್ಕೆಯಾದ ಒಟ್ಟು ಫಲಾನುಭವಿಗಳ ಸಂಖ್ಯೆ 535. ಇದು ಏನು? ಅಂದರೆ ಅರ್ಜಿಗಳು ಇಲ್ಲದ್ದಕ್ಕಿಂತ ಜಾಸ್ತಿ ಆಯ್ಕೆಯಾದರು. ಆಮೇಲೆ 101 ಫಲಾನುಭವಿಗಳ ಅರ್ಜಿಗಳೇ ಲಭ್ಯವಿಲ್ಲವೆಂದು ಹೇಳುತ್ತಾರೆ. ಇವೆಲ್ಲಾ ಗೋಲ್‌ಮಾಲ್ ನಡೆದಿದೆ.